ಸಾಕ್ಷಿದಾರನನ್ನು ಕರೆಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 19-03-2022.

**ಮುಂದುವರೆದ ಪಾಟೀ ಸವಾಲು - 1 ನೇ ಆರೋಪಿ ಪರ ಶ್ರೀ ಎ. ಎ. ಪಿ. ವಕೀಲರಿಂದ.**

1) ಪಿರ್ಯಾಧಿ ನಿಪಿ-1 ನ್ನು ನಾನೇ ಪೋಲೀಸ್ ಠಾಣೆಯಲ್ಲಿ ಬರೆದು ಕೊಟ್ಟಿರುತ್ತೇನೆ. ಆರೋಪಿತರುಗಳು ಮೊಬೈಲ್‌ನ್ನು ಕಳುವು ಮಾಡಿ, ಮಾರಿರುತ್ತಾರೆ ಎಂದು ನೀವು ಆಧರಿಸಿದ್ದೂ, ಸದರಿ ಮೊಬೈಲಗಳನ್ನು ಖರೀದಿಗೆ ತೆಗೆದುಕೊಂಡ ವ್ಯಕ್ತಿಗಳಿಂದ ಜಪ್ತು ಮಾಡುವ ಕಾಲಕ್ಕೆ ನೀವು ಇದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ಉತ್ತರಿಸುತ್ತಾರೆ. ಪೋಲೀಸರು ಘಟನಾ ಸ್ಥಳಕ್ಕೆ ದೂರನ್ನು ನೀಡಿದ ಅಂದರೆ ದಿಃ 20.11.2018 ರಂದು ಮಧ್ಯಾಹ್ನ ನಂತರ ಘಟನಾ ಸ್ಥಳಕ್ಕೆ ಬಂದು ಪಂಚನಾಮೆಯನ್ನು ಮಾಡಿರುತ್ತಾರೆ.

2) ನನ್ನ ಅಂಗಡಿಯ ಶೆಟ್ಟರಗಳನ್ನು ಪೋಲೀಸರು ಪಂಚನಾಮೆ ಮಾಡುವ ಕಾಲಕ್ಕೆ ಮೇಲೆ ಎಳೆದಿರುತ್ತಾರೋ ಅಥವಾ ಕೆಳಗೆ ಇಳಿಸಿರುತ್ತಾರೋ ಎಂಬ ಪ್ರಶ್ನೆಗೆ ಸಾಕ್ಷಿಯು ಪೋಲೀಸರು ಘಟನಾ ಸ್ಥಳಕ್ಕೆ ಬಂದು ಮೇಲೆ ಎಳೆದಿರುತ್ತಾರೆ ಎಂದು ಉತ್ತರಿಸುತ್ತಾರೆ. ದಿಃ 28.12.2018 ರಂದು ಪೋಲೀಸರು ಘಟನಾ ಸ್ಥಳಕ್ಕೆ ಆರೋಪಿತರುಗಳನ್ನು ಕರೆದುಕೊಂಡು ಬಂದು ಪಂಚನಾಮೆಯನ್ನು ಮಾಡಿರುತ್ತಾರೆ. ಆರೋಪಿತರುಗಳನ್ನು ಪೋಲೀಸರು ಎಲ್ಲಿಂದ ಕರೆದುಕೊಂಡು ಬಂದಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ.

3) ನಾನು ನೀಡಿದ ಮಾಹಿತಿಯಂತೆ ಪೋಲೀಸರು ಗಣಕಯಂತ್ರದ ಮೂಲಕ ಬೆರಳಚ್ಚು ಮೂಲಕ ತೆಗೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಾನು ಆಧರಿಸುವಂತೆ ಯಾವುದೇ ಅಪರಾಧ ಎಸಗದಿದ್ದರೂ ಸಹಿತ ಅವರನ್ನು ಪ್ರಕರಣದಲ್ಲಿ ಸಿಲುಕಿಸುವ ಸಲುವಾಗಿ ನನ್ನ ಜೊತೆ ಖೊಟ್ಟಿ ಪಿರ್ಯಾಧಿ ತೆಗೆದುಕೊಂಡು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/-

ದಿವಾಣಿ ನ್ಯಾಯಾಧೀಶರು,

ಬ್ಯಾಡಗಿ.